<u>ಎಂ ವಿ ಸಿ.ನಂ. 276/2023</u> <u>ಪಿಡಬ್ಲೂಃ 2</u>

<u>ದಿನಾಂಕಃ 09-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**Case advanced**.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಎ ವಿ ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಸಾಕ್ಷಿ ಅರ್ಜಿದಾರರಿಗೆ ನೀಡಿದ ಟ್ರೀಟ್ ಮೆಂಟ್ ಹಾಗೂ ಡಿಸೆಬಿಲಿಟಿ ಸರ್ಟಿಫಿಕೇಟ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದೆ. ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಿಪಿ-13 ಸಬ್ ಟೈಟಲ್ 5(ಎ) ನಲ್ಲಿ ಇನಪೆಕ್ಷನ್ ಎಂದು ನಮೂದಿಸುವ ಬದಲು ತಪ್ಪಾಗಿ ಇಂಜೆಕ್ಷನ್ ಎಂದು ನಮೂದಿಸಲಾಗಿದೆ . ಆ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ . ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಅರ್ಜಿದಾರರನ್ನು ಪರೀಕ್ಷಿಸಿ ಮತ್ತು ಹೊರಗೋಗಿ ಮತ್ತು ಒಳರೋಗಿ ದಾಖಲಾತಿ , ಕ್ಷ ಕಿರಣ ತಪಾಸಣೆ ಈ ಎಲ್ಲಾ ಅಂಶಗಳನ್ನು ಕ್ರೋಢಿಕರಿಸಿ ಅಂಗನ್ಯೂನ್ಯತಾ ಪ್ರಮವಣ ಪತ್ರವನ್ನು ನೀಡಿರುತ್ತೇನೆ . ಸಾಕ್ಷಿ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಒಟ್ಟಾರೆಯಾಗಿ ನಿಪಿ -40 ಎಂದು ಗುರುತಿಸಲಾಯಿತು.

(ಪ್ರಕರಣವನ್ನು ಪಾಟೀ ಸವಾಲಿಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.